ಒಂದು ಇನ್ನೊಂದರಲ್ಲಿ ಹಲವು ಪಾತಳಿಗಳಲ್ಲಿ ಬೆರೆತು ಅನಂತತತ್ತ್ವಗಳ ಹುಟ್ಟಿಗೆ ಕಾರಣವಾಗಿದೆ. ಈ ಅನಂತಸಾಧ್ಯತೆಗೆ ಕಾರಣವಾಗಿರುವುದು ಅವುಗಳ ಹೊಂದಾಣಿಕೆಯ ಗುಣ; ಸಹಜೀವನ. ಆಕಾಶ, ಜಲ, ವಾಯು, ಪೃಥ್ವಿ, ತೇಜಸ್ಸುಗಳು ಒಂದೊಂದೂ 'ನಾನು ಬೇರೆ, ನೀನು ಬೇರೆ' ಎಂದು ಧರಣಿಯನ್ನು ಹೂಡಿದಿದ್ದರೆ ಸೃಷ್ಟಿಯೇ ಸಂಭವಿಸುತ್ತಿರಲಿಲ್ಲ. ಹೀಗಾಗಿ ಸೃಷ್ಟಿಯ ಮೂಲಗುಣವೇ ಸಹಜೀವನ; ಸಮರಸದ ಜೀವನ. ಎಂದರೆ ನನ್ನ ಸುಖಕ್ಕೆ ಇನ್ನೊಬ್ಬರು ಕಾರಣವಾಗಿರುವಾಗ ಆ ಮತ್ತೊಬ್ಬರ ಸುಖಕ್ಕೆ ನಾನೂ ಕ್ರಿಯಾಶೀಲನಾಗಬೇಕು; ಕರ್ತವ್ಯಮುಖಿನಾಗಬೇಕು ಎಂಬ ವಿವೇಕದ ಬದುಕು ನಮ್ಮದಾಗುತ್ತದೆ. ಹೀಗೆ ಕುಟುಂಬದಲ್ಲಿ, ಸಮಾಜದಲ್ಲಿ – ಎಲ್ಲರಲ್ಲೂ ಒಂದಾಗಿ – ಬಾಳುವ ಬದುಕು ಸದಾ ಉತ್ಸಾಹದಲ್ಲಿರುತ್ತದೆ; ಚಟುವಟಿಕೆಯಿಂದ ಕೂಡಿರುತ್ತದೆ; ಅದು ಎಂದಿಗೂ ದೈಹಿಕ ಶ್ರಮವನ್ನು ತಪ್ಪಿಸಿಕೊಳ್ಳಲು ಹಂಬಲಿಸದು; ವಿಶ್ವಯಜ್ಞದಲ್ಲಿ ಅದು ಸದಾ ನಿರತವಾಗಿರುತ್ತದೆ.

ಯಂತ್ರಗಳನ್ನು ಮನುಷ್ಯನು ಆವಿಷ್ಕರಿಸಲು ಆರಂಭಿಸಿದಾಗ, 'ಅವನ ಕಠಿಣವಾದ ದೈಹಿಕ ಶ್ರಮಗಳು ಕಡಿಮೆಯಾಗುತ್ತವೆ. ಆಗ ಅವನಿಗೆ ಹೆಚ್ಚು ಬಿಡುವಿನ ಸಮಯ ಒದಗುತ್ತದೆ. ಅದರಿಂದಾಗಿ ಅವನ ಜೀವನದಲ್ಲಿ ಗುಣಾತ್ಮಕ ಅಂಶಗಳು ಹೆಚ್ಚಿ ಅದು ಸತ್ಯ–ಶಿವ–ಸೌಂದರ್ಯಗಳ ಸಾಕ್ಷಾತ್ಕಾರಕ್ಕೆ ನೆರವಾಗುತ್ತದೆ' ಎಂದು ಊಹಿಸಲಾಗಿತ್ತು. ಆದರೆ ಈ ನಿರೀಕ್ಷೆ ಸುಳ್ಳಾಗಿದೆ. ಯಂತ್ರಜ್ಞಾನ–ತಂತ್ರಜ್ಞಾನಗಳು ಮನುಷ್ಯನನ್ನು ಸೋಮಾರಿಗಳನ್ನಾಗಿಸಿವೆ; ಅವನ ಬದುಕಿನ ಸಹಜ ಸೌಂದರ್ಯವನ್ನು ಅಳಿಸಿ ಹಾಕಿ ಕೃತಕವೂ ಜಡವೂ ಆದ ಯಾಂತ್ರಿಕ ಬದುಕನ್ನು ಹೇರುತ್ತಿದೆ. ಸೃಷ್ಟಿಯ ಅದ್ಭುತ ಯಂತ್ರವೇ ಮನುಷ್ಯ – ಎಂಬ ಸತ್ಯವನ್ನು ಮರೆತು, ಅದರ ಉಪಯೋಗವನ್ನೇ ನಿಲ್ಲಿಸಲು ತೊಡಗಿದರೆ ಅದು ಇದ್ದ ಜಾಗದಲ್ಲಿಯೇ ತುಕ್ಕು ಹಿಡಿದು ನಾಶವಾಗಬೇಕಾಗುತ್ತದೆ. ಸೃಷ್ಟಿಯಲ್ಲಿ ಕೋಟಿ ಕೋಟಿ ವಿದ್ಯಮಾನಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಅವೇನಾದರೂ ಒಂದೇ ಒಂದು ಕ್ಷಣ ಅವುಗಳ ಕೆಲಸವನ್ನು ನಿಲ್ಲಿಸಿದರೂ ನಮ್ಮ ಅಸ್ತಿತ್ವವೇ ಇಲ್ಲವಾಗುತ್ತದೆ. ನಾವು ಸೃಷ್ಟಿಗೆ ಸಲ್ಲಿಸಬೇಕಾದ ಕೃತಜ್ಞತೆ ಎಂದರೆ ನಾವೂ ಕೂಡ ಅದರೊಂದಿಗೆ ಹೆಜ್ಜೆ ಹಾಕುತ್ತಲೇ ಸಾಗುವುದು. ಕಾಯಕಸಂಸ್ಕೃತಿಯ ಜೀವಂತಿಕೆಯಲ್ಲಿಯೇ ನಮ್ಮ ಜೀವನದ ದಿಟವಾದ ಸುಖದ ಗುಟ್ಟು ಅಡಗಿದೆ.

ಆದರೆ ನಾವು ಇಂದು ಆ ಒಂಟೆಯಂತೆ ಸೋಮಾರಿಗಳಾಗಲು ಹೊರಟಿದ್ದೇವೆ. ನಮ್ಮ ತಿಳಿಗೇಡಿತನವು ಜಡತೆಯನ್ನೇ ಸುಖ ಎಂದು ನಂಬಿಸುತ್ತಿದೆ. ನಮ್ಮ ನಿತ್ಯಜೀವನದ ಪ್ರತಿ ಕ್ಷಣವೂ ತಪಸ್ಸಿನ ಕಾಲವೇ ಹೌದು; ಏಕೆಂದರೆ ಅವು ನಮ್ಮ ದೇಹ–ಮನಸ್ಸು–ಬುದ್ಧಿಗಳನ್ನು ಜೀವನದ ಸಾಕ್ಷಾತ್ಕಾರಕ್ಕೆ ಸಿದ್ಧಮಾಡುತ್ತಿರುತ್ತವೆ. ಈ ತಪಸ್ಸಿಗೆ ನಮ್ಮಿಂದ ಹೊರಗೆ ದೇವರು ಪ್ರತ್ಯಕ್ಷನಾಗಿ ವರವನ್ನು ನೀಡದಿರಬಹುದು. ಆದರೆ ಅದು ನಮ್ಮಲ್ಲಿಯೇ ಇರುವ ದೈವತ್ವನ್ನು ಎಚ್ಚರಿಸುತ್ತದೆ. ಸುಭಾಷಿತವೊಂದು ಈ ಸ್ಪಂದನೆಯನ್ನು ಸೊಗಸಾಗಿ ಹೇಳಿದೆ; ಹೀಗೆ:

ನ ದೇವಾ ದಂಡಮಾದಾಯ ರಕ್ಷಂತಿ ಪಶುಪಾಲವತ್ |
ಯಂ ಹಿ ರಕ್ಷಿತುಮಿಚ್ಛಂತಿ ಬುದ್ಧ್ಯಾ ಸಂಯೋಜಯಂತಿ ತಮ್ ||

'ದನಕಾಯುವವನು ಕೋಲಿನಿಂದ ದನಗಳನ್ನು ನೋಡಿಕೊಳ್ಳುವಂತೆ ದೇವತೆಗಳು ನಮ್ಮನ್ನು ರಕ್ಷಿಸುವುದಕ್ಕೆ ಬರುವುದಿಲ್ಲ; ಯಾರನ್ನು ಕಾಪಾಡಬೇಕೆಂದು ಅವರು ಇಷ್ಟಪಡುತ್ತಾರೆಯೋ ಅವರಿಗೆ ಆ ರೀತಿಯ ಬುದ್ಧಿಯನ್ನು ಕೊಡುತ್ತಾರೆ.'